2. ಅಧ್ಯಕ್ಷರ ಅಪ್ಪಣೆಮೇರೆಗೆ ಬೆನ್ನಿಹಿನ್ ಕಾರ್ಯಕ್ರಮದ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಈ ನಾಡಿನ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾಗಿರುವುದರಿಂದ, ಗ್ರಾಮೀಣ ಜನರ, ರೈತರ ಸಮಸ್ಯೆ ಬಗ್ಗೆ ಚರ್ಚೆಯಾಗಬೇಕಾಗಿರುವುದರಿಂದ, ಯಾವುದೇ ಕಾರಣಕ್ಕೂ ಸದನದ ಕಾರ್ಯಕಲಾಪಕ್ಕೆ ಅಡ್ಡಿ ಮಾಡುವಂಥ ಕೆಲಸವನ್ನು ಮಾಡುವುದಿಲ್ಲವೆನ್ನುವ ಭರವಸೆಯನ್ನು ಕೊಡುತ್ತೇನೆ. 8 ತಿಂಗಳು ಕಳೆದ ನಂತರ ಈ ಅಧಿವೇಶನ ಪ್ರಾರಂಭವಾಗಿದೆ. ನಮ್ಮದೇ ಆದಂಥ ಹೋರಾಟವನ್ನು ಮಾಡುವುದಕ್ಕೆ ಬೇರೆ ಬೇರೆ ರೀತಿ ನೀತಿಗಳಿವೆ. ನನ್ನ ವಿನಂತಿ ಏನೆಂದರೆ, ಬೆನ್ನಿಹಿನ್ ಇವತ್ತು ದೇಶದಿಂದ ಹೊರಟುಹೋಗುವಂಥ ಸಂಭವವಿದೆ. ಅನೇಕ ದಾಖಲೆಗಳಿವೆ, ತಕ್ಷಣ ಅವರನ್ನು ಬಂಧಿಸಬೇಕಾಗಿದೆ. ಸುಪ್ರೀಂಕೋರ್ಟಿನ ಸಿಟ್ಟಿಂಗ್ ನ್ಯಾಯಾಧೀಶರಿಂದ ತನಿಖೆಯಾಗಬೇಕಾಗಿದೆ. ಆ ವಿವರಗಳನ್ನು ಈಗ ಸರ್ಕಾರದ ಗಮನಕ್ಕೆ ತರುತ್ತೇನೆ. ಮೇಲ್ಮನೆಯಲ್ಲಿ ಈಗಾಗಲೇ ಈ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬೆನ್ನಿಹಿನ್ ಕಾರ್ಯಕ್ರಮಕ್ಕೆ ಹೋದದ್ದು ಸರಿಯೋ ತಪ್ಪೋ ಅದು ಬೇರೆ ವಿಷಯವಾಗಿದ್ದು, ಅದು ನಿಮಗೆ ಬಿಟ್ಟಿರುವಂಥದ್ದಾಗಿದೆ. ಆದರೆ ಅತ್ಯಂತ ಪ್ರಮುಖವಾಗಿ ಈ ಸರ್ಕಾರದ ಗಮನಕ್ಕೆ ತುರ್ತಾಗಿ ತರಬೇಕೆನ್ನುವಂಥದ್ದು, ಈಗ ಯಾವ ಬೆನ್ನಿಹಿನ್ ಒಂದು ಮಾತನ್ನು ಇವತ್ತು ಹೇಳಿರುವಂಥದ್ದು ಏನೆಂದರೆ, ...

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ಪ್ರಶ್ನೋತ್ತರವಾದ ಮೇಲೆ ಇದನ್ನು ತೆಗೆದುಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಆಮೇಲೆ ತೆಗೆದುಕೊಳ್ಳಿ, ಇಲ್ಲಿ ನಾನು ಒಂದು ಅಶ್ಯೂರೆನ್ಸ್ ಅನ್ನು ನಿಮಗೆ ಏನು ಕೊಡುತ್ತಿದ್ದೇನೆಂದರೆ, ... ಆ ಮೇಲೆ ತೆಗೆದುಕೊಳ್ಳೋಣ ಸರ್. ನಿಮಗೆ ಕನ್‌ವಿನ್ಸ್ ಆಗದೇ ಹೋದರೆ ನಾನು ಕುಳಿತುಕೊಂಡುಬಿಡುತ್ತೇನೆ.

ಅಧ್ಯಕ್ಷರು:– ಮೊದಲು ಪ್ರಶ್ನೋತ್ತರ ವೇಳೆ ಆಗಲಿ, ಅನಂತರ ತಾವು ಪ್ರಸ್ತಾಪ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭದಲ್ಲಿ ಇಂಪಾರ್ಟೆನ್ಸ್ ಕೊಟ್ಟು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಆ ಸ್ಥಾನದಲ್ಲಿ ಕುಳಿತುಕೊಂಡು ಅನುಮತಿ ಕೊಡುವುದಕ್ಕೆ ಅವಕಾಶವಿದೆ. ನಾನು ಪ್ರಾರ್ಥನೆ ಮಾಡುವುದೇನೆಂದರೆ, ಇವತ್ತು ರಾಜ್ಯದಲ್ಲಿ ಅಶಾಂತಿ ನಿರ್ಮಾಣವಾಗುವುದಕ್ಕೆ ನಾವು ಅವಕಾಶ ಮಾಡಿಕೊಡುವುದು ಬೇಡ. ಬೆನ್ನಿಹಿನ್ ಕಾರ್ಯಕ್ರಮದ ನಂತರ, ಅವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದೇನೆಂದರೆ, ಇವತ್ತು ಪತ್ರಿಕೆಯನ್ನು ನೋಡಿದರೆ– ಬೆನ್ನಿಹಿನ್‌ನ ವೈಭವದ ಸಮಾರಂಭಕ್ಕೆ ಸುನಾಮಿ ಒಂದು ಘಟನೆ ಹೇಗೋ, ಅದಕ್ಕೆ ಸರಿಯಾದಂಥ ಅದೇ ರೀತಿಯ ಒಂದು ಸಂದರ್ಭ ಇದೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.....

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಅವರಿಗೆ ಮಾತನಾಡುವುದಕ್ಕೆ ತಾವು ಪರ್ಮಿಷನ್ ಕೊಟ್ಟಿದ್ದೀರಾ? ಅವರು ಯಾವುದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗ ತಾವು ಅವರಿಗೆ ಅವಕಾಶವನ್ನು ಕೊಡದೆ ಅವರು ಹೇಗೆ ಮಾತನಾಡುತ್ತಾರೆ? ಅವರು ಮಾತನಾಡುವುದಕ್ಕೆ ತಾವು ಆದೇಶ ಕೊಟ್ಟಿದ್ದರೆ ಪರವಾಗಿಲ್ಲ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ, ಈಗ ಯಾವ ಪ್ರಸ್ತಾಪ ಮಾಡಿದಿರಿ, ಇದಕ್ಕೆ ಸರ್ಕಾರದ ಕಡೆಯಿಂದ ಏನು ಹೇಳುತ್ತಾರೆನ್ನುವುದನ್ನು ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಅವನನ್ನು ಬಂಧನ ಮಾಡಬೇಕಾಗಿದೆ. 52 ವರ್ಷದ ಒಬ್ಬ ವ್ಯಕ್ತಿ ಅಲ್ಲಿ ಹೋದಾಗ ಬೆನ್ನಿಹಿನ್.....

(ಗೊಂದಲ)

ಅಧ್ಯಕ್ಷರು:– ದಯಮಾಡಿ ತಾವೆಲ್ಲ ಕುಳಿತುಕೊಳ್ಳಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ:– ಮಾನ್ಯ ಅಧ್ಯಕ್ಷರೆ, ದಯಮಾಡಿ ಪ್ರಶ್ನೋತ್ತರ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ತಮ್ಮಿಂದ ಅನುಮತಿ ಪಡೆಯದೆ ಅವರು ಹೇಗೆ ಮಾತನಾಡುತ್ತಾರೆ?

ಗೊಂದಲ

ಅಧ್ಯಕ್ಷರು:– ನಾನು ಇಷ್ಟು ಹೇಳಿದ ಮೇಲೂ ಮಾನ್ಯ ವಿರೋಧ ಪಕ್ಷದ ನಾಯಕರು ಈ ರೀತಿ ಮಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ:– ಬಹಳ ಮುಖ್ಯವಾದ ವಿಷಯವನ್ನು ಅವರೇ ಹೇಳಿರುವಂತೆ....

ಗೊಂದಲ

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೆ, ನಿಯಮಾವಳಿಗಳನ್ನು ನೋಡೋಣ. ಈಗ ನಿಲುವಳಿ ಸೂಚನೆಯನ್ನು ತಾವೇ ಕಳುಹಿಸಿದ್ದೀರಿ. ಆ ನಿಲುವಳಿ ಸೂಚನೆಯಲ್ಲಿಲ್ಲದ ಯಾವುದೋ ವಿಚಾರವನ್ನು ಪ್ರಸ್ತಾಪ ಮಾಡಿದರೆ ಹೇಗೆ? ವಿರೋಧ ಪಕ್ಷದ ನಾಯಕರಾಗಿ ಹೀಗೆ ಮಾಡಿದರೆ ಹೇಗೆ? ನಿಯಮಾವಳಿ ಪ್ರಕಾರ ಹೋಗೋಣ. ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ತನಿಖೆಯಾಗಬೇಕಾಗಿದೆ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:– ನಾನು ನಿಂತುಕೊಂಡಿರುವಾಗ ನೀವು ಈ ರೀತಿ ಎದ್ದುನಿಂತುಕೊಂಡು ಮಾತನಾಡುವುದು ಸರಿಯಲ್ಲ. ಈ ಎಲಿಮೆಂಟರಿಯನ್ನೂ ಸಹ ನಾನು ನಿಮಗೆ ಹೇಳಿಕೊಡಬೇಕೇನು? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್:– ಅಧ್ಯಕ್ಷರಿಂದ ಪರ್ಮಿಷನ್ ತೆಗೆದುಕೊಂಡು ಅವರು ಏನಾದರೂ ಮಾಡಲಿ.

ಶ್ರೀ ಆರಗ ಜ್ಞಾನೇಂದ್ರ:– ಪರ್ಮಿಷನ್ ಅನ್ನು ಅವರು ಅಧ್ಯಕ್ಷರ ಹತ್ತಿರ ಕೇಳುತ್ತಿದ್ದಾರೆ.....

(ಗೊಂದಲ)

ಅಧ್ಯಕ್ಷರು:– ಮಾನ್ಯ ಆರಗ ಜ್ಞಾನೇಂದ್ರರವರೆ, ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ. ಇದೇ ವಿಚಾರದ ಸಲುವಾಗಿ ಮೇಲ್ಮನೆಯಲ್ಲಿ ಈಗಾಗಲೇ ಚರ್ಚೆ ಪ್ರಾರಂಭವಾಗಿದೆ. ಈ ಸದನದಲ್ಲಿ ಇದಕ್ಕೆ importance ಕಡಿಮೆಯಾಗಬಾರದು. ಅದಕ್ಕಾಗಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಆಗಲಿ, ಆಯಿತು, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗ ತಕ್ಷಣ ನಮಗೆ ಇಷ್ಟು ಅಶ್ಯೂರೆನ್ಸ್ ಅನ್ನು ಸರ್ಕಾರ ಕೊಡಲಿ. ಅದೇನೆಂದರೆ, ಅವರು ಇನ್ನೂ ಬಿಟ್ಟು ಹೋಗಿಲ್ಲ. ಅವರ ಬಂಧನ ಮಾಡುತ್ತೇವೆ, ಸುಪ್ರೀಂಕೋರ್ಟಿನ ನ್ಯಾಯಾಧೀಶರಿಂದ ತನಿಖೆ ಮಾಡಿಸುತ್ತೇವೆ ಎನ್ನುವ ಭರವಸೆಯನ್ನು ಸರ್ಕಾರ ಕೊಡಬೇಕು.

ಅಧ್ಯಕ್ಷರು:– ನಾನು ಇಲ್ಲಿ ಎದ್ದು ನಿಂತು ಹೇಳುತ್ತಿರುವಾಗ, ತಾವು ವಿರೋಧ ಪಕ್ಷದ ನಾಯಕರಾಗಿ ಮಾತನಾಡಿದರೆ ಹೇಗೆ? ದಯಮಾಡಿ ಸುಮ್ಮನಿರಿ. ದಯಮಾಡಿ ಕುಳಿತುಕೊಳ್ಳಬೇಕು. ಶ್ರೀ ವಾಟಾಳ್ ನಾಗರಾಜ್‌ರವರೆ, ತಾವು ಸಹ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಬೆನ್ನಿಹಿನ್ ಜೊತೆಗೆ

(ಗೊಂದಲ)

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ. ಹೀಗೇಕೆ ಮಾಡುತ್ತೀರಿ? ನೀವು ಕುಳಿತುಕೊಳ್ಳಿ. ಆನಂತರ ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ ಅವರು ಏನು ಹೆಸರು ಹೇಳಿದ್ದಾರೆ. That should not go on record. ಅದು ಇಲ್ಲಿ ಬರುವ ಹಾಗಿಲ್ಲ. ಅದು ರೆಕಾರ್ಡ್‌ಗೆ ಹೋಗಬಾರದು.

(ಗೊಂದಲ)

ಅಧ್ಯಕ್ಷರು:– ದಯಮಾಡಿ ಇದು ಯಾವುದೂ ರೆಕಾರ್ಡ್‌ಗೆ ಹೋಗಬಾರದು.

(ಗೊಂದಲ)

ಅಧ್ಯಕ್ಷರು:– ನಾನು ಎದ್ದುನಿಂತುಕೊಂಡಾಗಲೂ ಈ ರೀತಿ ಮಾಡುವುದಾದರೆ, nothing should go on record. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಮೊದಲು ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ ಸ್ವಾಮಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ...ಇಡೀ ದೇಶವನ್ನು ಕ್ರಿಶ್ಚಿಯನ್‌ಮಯ ಮಾಡುವಂಥ ಷಡ್ಯಂತ್ರದಿಂದ ಮತಾಂತರಕ್ಕಾಗಿ ಬಂದಿರುವಂಥ ವ್ಯಕ್ತಿಗೆ ಈಗ ಸರ್ಕಾರ ನಮ್ಮ

ರಾಜ್ಯದಲ್ಲಿ ಸಮಾರಂಭ ನಡೆಸುವುದಕ್ಕೆ ಹೇಗೆ ಅನುಮತಿ ಕೊಟ್ಟಿತು? ಇದು ಇಲ್ಲಿರುವಂಥ ಪ್ರಶ್ನೆ. ಅನೇಕ ವಿಚಾರಗಳಿರುವುದರಿಂದ ಇದರ ಬಗ್ಗೆ ಸುಪ್ರೀಂಕೋರ್ಟಿನ ನ್ಯಾಯಾಧೀಶರಿಂದ ತನಿಖೆಯಾಗಬೇಕಾಗಿದೆ. ಅವರನ್ನು ತಕ್ಷಣ ಬಂಧನ ಮಾಡಬೇಕಾಗಿದೆ. 'ಈ ರೀತಿ ಚಟುವಟಿಕೆಗಳು ನಡೆದರೆ ಅವರ ಬಂಧನ ಮಾಡುತ್ತೇನೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಹೇಳಿದ್ದರು. ಈಗ ಯಾವನೇ ಒಬ್ಬ ಅವನನ್ನು ಮುಟ್ಟತಕ್ಕಂಥ ಶಕ್ತಿ ನಿಮ್ಮಲ್ಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ (ಕಂದಾಯ ಸಚಿವರು):– ಅವರು ನಿಯಮಾವಳಿಗಳ ಪ್ರಕಾರ ಆ ವಿಚಾರವನ್ನು ಪ್ರಸ್ತಾಪ ಮಾಡಬೇಕು. ಇದು ಒಂದನೆಯದು. ಇನ್ನು ಎರಡನೆಯದಾಗಿ, ಮಾನ್ಯ ಸಭಾಧ್ಯಕ್ಷರೆ, ಪ್ರಶ್ನೋತ್ತರ ವೇಳೆ ಇನ್ನೂ ಕೂಡ ಆಗಬೇಕಾಗಿದೆ.

(ಗೊಂದಲ)

ಅಧ್ಯಕ್ಷರು:– ವಿರೋಧ ಪಕ್ಷದ ನಾಯಕರಾಗಿದ್ದುಕೊಂಡು ಈ ತರಹ ಮಾತನಾಡಿದರೆ ಹೇಗೆ? ತಾವು ಪ್ರಸ್ತಾಪ ಮಾಡಿದ್ದೀರಿ, ಆಯಿತು, ನಾನು ಸರ್ಕಾರವನ್ನು ಕೇಳುತ್ತೇನೆ. ಪ್ರಶ್ನೋತ್ತರ ವೇಳೆ ಇದೆ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಒಂದು ಕ್ರಿಯಾಲೋಪ ಇದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ. ದಯಮಾಡಿ ಎಲ್ಲಾ ಕುಳಿತುಕೊಳ್ಳಿ. ನಾನು ಒಂದು ವಿಚಾರವನ್ನು ಮೊದಲೇ ಪ್ರಸ್ತಾಪ ಮಾಡಬೇಕೆಂದಿದ್ದೆ. ಅಷ್ಟರೊಳಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಎದ್ದುನಿಂತುಕೊಂಡರು. ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಈ ಸದನದಲ್ಲಿ ಏನಾಯಿತೆಂದು ಮಾನ್ಯ ಸದಸ್ಯರಾದ ತಮಗೆಲ್ಲರಿಗೂ ತಿಳಿದಿದೆ. ಆದರಿಂದ ನನ್ನ ಮನಸ್ಸಿಗೆ ಬಹಳ ನೋವಾಗಿದೆ. ಈ ಸದನದ ಗೌರವ ಕಡಿಮೆಯಾಗಿದೆಯೆಂದು ನಾನು ಭಾವಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:– ಈ ಬಗ್ಗೆ ನಾನು ತೀವ್ರ ಅಸಂತೋಷ ವ್ಯಕ್ತಪಡುತ್ತೇನೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದ್ದರೂ ಸಹ ಮುಂದೆ ನಮ್ಮ ಸದಸ್ಯರು ಈ ರೀತಿಯಲ್ಲಿ ನಡೆದುಕೊಳ್ಳಬಾರದು, ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು, ಈ ಸದನದ ಗೌರವವನ್ನು ಎತ್ತಿ ಹಿಡಿಯಬೇಕೆನ್ನುವುದನ್ನು ಎಲ್ಲರೂ ತಿಳಿದುಕೊಳ್ಳಬೇಕು, ಆತ್ಮಾವಲೋಕನ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಎಲ್ಲರಿಗೂ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

137-12 **Mr Speaker:-** No, no, no. ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:– ಯಾವ ಸಂದರ್ಭದಲ್ಲಿ ಯಾವ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕು, ಯಾವ ರೀತಿ ನಡೆದುಕೊಳ್ಳಬೇಕೆನ್ನುವುದು ಎಲ್ಲರಿಗೂ ಗೊತ್ತಿರಬೇಕು. ಐದೂವರೆ ಕೋಟಿ ಜನರ ಪ್ರತಿನಿಧಿಗಳಾದ ನಿಮ್ಮನ್ನು ಇಡೀ ದೇಶ ನೋಡುತ್ತಿದೆ. ಆದ್ದರಿಂದ, ಎಲ್ಲರೂ ಸಹ ಮುಂದೆ ಈ ರೀತಿಯ ನಡವಳಿಕೆ ಆ ನಿಟ್ಟಿನಲ್ಲಿ ಪುನರಾವರ್ತನೆ ಆಗದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಮತ್ತೊಮ್ಮೆ ನಾನು ಎಲ್ಲರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಧರ್ಮ್ ಸಿಂಗ್ (ಮುಖ್ಯಮಂತ್ರಿ):– ಮಾನ್ಯ ಯಡಿಯೂರಪ್ಪನವರು ಯಾವ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಅದರ ಬಗ್ಗೆ ತಡವಾಗಿ ನಾನು ಉತ್ತರ ಕೊಡುತ್ತೇನೆ. ಅದರ ಬಗ್ಗೆ ಏನೂ ಅಬ್ಜೆಕ್ಷನ್ ಇಲ್ಲ. ಇಲ್ಲಿ ಸ್ಪೀಕರ್‌ರವರು ನಮ್ಮ ಸಭಾಧ್ಯಕ್ಷರು. ಸಭಾಧ್ಯಕ್ಷರು ಏನೋ ಮಾತು ಹೇಳುತ್ತಿದ್ದಾರೆ. ತಾವು ವಿರೋಧ ಪಕ್ಷದ ನಾಯಕರಾಗಿದ್ದೀರಿ, ನಾನು ಸಭಾನಾಯಕನಾಗಿದ್ದೇನೆ. ಆದರೆ ಸಭಾಧ್ಯಕ್ಷರು ಏನು ಹೇಳುತ್ತಾರೆ ಅದನ್ನು ಕೇಳುವುದು ನಮ್ಮ ಕರ್ತವ್ಯ. ಅವರು ಕೇಳತಕ್ಕಂಥದ್ದಕ್ಕೆ ಅವಕಾಶ ಇರುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾವು ಇದನ್ನು ಇಲ್ಲಿ ಪ್ರಸ್ತಾಪ ಮಾಡದೆ ಇನ್ನೆಲ್ಲಿ ಪ್ರಸ್ತಾಪ ಮಾಡಬೇಕು? ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ. ಆ ಪೀಠದಲ್ಲಿ ಕುಳಿತು ಆಜ್ಞೆ ಮಾಡಿದಂಥವರ ಪರಿಪಾಲಕರು ನಾವು. ನಿಮ್ಮ ಮೇಲೆ ಗೌರವವಿದೆ. ಈ ಕಾನೂನು ಚೌಕಟ್ಟಿನಲ್ಲಿ ಬೇರೆ ಕಲಾಪಗಳನ್ನು ಸಸ್ಪೆಂಡ್ ಮಾಡಿ ಇದಕ್ಕೆ ಅವಕಾಶ ಮಾಡಿಕೊಡುವಂಥ ಅಧಿಕಾರ ನಿಮಗಿದೆ. ನೀವು ಯಾವ ರೀತಿ ಅವಕಾಶ ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು:– ಈಗ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ....ನಾವು ಅದೇ ರೀತಿ ನಡೆದುಕೊಳ್ಳುತ್ತೇವೆ. ಯಾವ ರೀತಿ ಅವಕಾಶ ಮಾಡಿಕೊಡುತ್ತೀರಿ ಎನ್ನುವುದನ್ನು ಹೇಳಿ. ಅದಕ್ಕೂ ನಾವು ತಲೆಬಾಗುವುದಕ್ಕೆ ಸಿದ್ಧರಿದ್ದೇವೆ.

ಅಧ್ಯಕ್ಷರು:– ಆಯಿತು, ದಯಮಾಡಿ ಕುಳಿತುಕೊಳ್ಳಿ. ಈಗ ಸಭಾನಾಯಕರು ಮಾತನಾಡುತ್ತಾರೆ.

ಶ್ರೀ ಎನ್. ಧರ್ಮ್‌ಸಿಂಗ್:– ಮೊನ್ನೆಯ ದಿವಸ ರಾಜ್ಯಪಾಲರ ಭಾಷಣ ಆದಮೇಲೆ ಇವತ್ತಿನ ದಿವಸ ನಾವು ಸದನದಲ್ಲಿ ಸೇರಿದ್ದೇವೆ. ಅಧ್ಯಕ್ಷರು ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಆದಂಥ ಘಟನೆಗಳ ಬಗ್ಗೆ ಉಲ್ಲೇಖ ಮಾಡುತ್ತಿದ್ದಾರೆ. ಉಲ್ಲೇಖ ಮಾಡತಕ್ಕಂಥದ್ದು ಮತ್ತು ತಮ್ಮ ಅಭಿಪ್ರಾಯಕ್ಕೆ ಸದನಕ್ಕೆ ಒಂದು ಆದೇಶ ಕೊಡತಕ್ಕಂಥದ್ದು ಅವರ ಕರ್ತವ್ಯ ಇದೆ. ಮೊದಲು ಅವರು ಏನು ಹೇಳುತ್ತಿದ್ದಾರೆನ್ನುವುದನ್ನು ಕೇಳಿರಿ, ಅದಕ್ಕೆ ಅಡ್ಡಿಆತಂಕ ಮಾಡಬೇಡಿ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ರಾಜ್ಯಪಾಲರ ಭಾಷಣ ಆಗುವಾಗ ಇದು ಕರ್ನಾಟಕ ಶಾಸನ ಸಭೆ ಎಂದು ಅಲ್ಲ, ಅವರಿಗೆ ಅಗೌರವ ಮಾಡಬೇಕೆಂಬುದಾಗಲೀ ಅಥವಾ ಈ ಸದನಕ್ಕೆ ಅಗೌರವ ಮಾಡಬೇಕೆಂದಾಗಲೀ ಸಭಾತ್ಯಾಗ, ಪ್ರತಿಭಟನೆ ಮಾಡಬೇಕೆಂದಲ್ಲ. ಅನೇಕ ವಿಚಾರಗಳನ್ನು ಅಂತಹ

ಸಂದರ್ಭದಲ್ಲಿ ರಾಜ್ಯದ ಜನತೆಯ, ತಮ್ಮ ಮತ್ತು ಸರ್ಕಾರದ ಗಮನ ಸೆಳೆಯುವುದಕ್ಕೆ ಅದೊಂದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನ. ರಾಜ್ಯಪಾಲರ ವಿರುದ್ಧ ಮಾಡಬೇಕು ಎಂದಲ್ಲ.

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ತಿಳಿದುಕೊಂಡಿರುವುದು ತಪ್ಪು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಬೇರೆ ಶಾಸನಸಭೆಗಳಲ್ಲಿ ಬಹಳಷ್ಟು ನಡೆದಿದೆ.

ಅಧ್ಯಕ್ಷರು:– ನಿಮಗೇನಾದರೂ ಅನ್ನಿಸಿದರೆ, ಆನಂತರ ಆ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಬಹುದು. ರಾಜ್ಯಪಾಲರು ಭಾಷಣ ಮಾಡುವಾಗ, ಆ ಸಂದರ್ಭದಲ್ಲಿ ಯಾವುದೇ ವಿಚಾರದಲ್ಲಿ ಅಡ್ಡಿ ಮಾಡುವುದಾಗಲೀ ಅನುಚಿತವಾಗಿ ನಡೆದುಕೊಳ್ಳುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಬೇರೆ ಶಾಸನ ಸಭೆಗಳನ್ನು ನೋಡಿದಾಗ, ಪಶ್ಚಿಮ ಬಂಗಾಳದಲ್ಲಿ ಜ್ಯೋತಿ ಬಸುರವರು ಉಪ ಮುಖ್ಯಮಂತ್ರಿಗಳಾಗಿದ್ದಾಗ, ಧರ್ಮವೀರರವರು ರಾಜ್ಯಪಾಲರಾಗಿದ್ದಾಗ, ಧರ್ಮವೀರರವರನ್ನು ತಡೆದು ನಿಲ್ಲಿಸಿದಾಗ, ಧಾಟಿ ಧಾಟಿ ಬಂದು ಭಾಷಣ ಮಾಡಿರುವುದು ಬೇರೆ ರಾಜ್ಯದ ಶಾಸನ ಸಭೆಯಲ್ಲಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ದಯಮಾಡಿ ನಾನು ಹೇಳುತ್ತೇನೆ. ಒಂದು ನಿಮಿಷ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ನಾವೇನು ನಿಯಮಗಳನ್ನು ಮಾಡಿದ್ದೇವೆ..... ಮಾನ್ಯ ವಾಟಾಳ್ ನಾಗರಾಜ್‌ರವರು.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಒಂದು ನಿಮಿಷ, ನಾನು ಮುಗಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೆ, ಈಗ ನಿಯಮಾವಳಿಗಳಿವೆ. ನಿಯಮಾವಳಿಗಳ ಪ್ರಕಾರ ನಾವು ಈ ಸಭೆ ನಡೆಸಬೇಕು. ನಿಯಮ 27 ಅನ್ನು ಓದುತ್ತೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:– ಸಾರ್, ತಾವು ಹೇಳಿದ್ದಕ್ಕೆ ನಾನು ಮುಗಿಸುತ್ತೇನೆ. ಇಲ್ಲಿ ಇದೇ ಸಂದರ್ಭದಲ್ಲಿ ಶ್ರೀಮಾನ್ ಎಸ್. ಗೋಪಾಲ ಗೌಡರವರು ಈ ಸದನದ ಹಿರಿಯರಾಗಿದ್ದರು.

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್‌ರವರೆ, ಯಾವುದೋ ಸಂದರ್ಭದಲ್ಲಿ ಯಾರೋ ಏನೋ ಮಾಡಿದರು, ಆದ್ದರಿಂದ ನಾವು ಮಾಡಬಹುದು ಅನ್ನತಕ್ಕಂಥದ್ದು ಒಳ್ಳೆಯದಲ್ಲ. ಈ ಸಭೆಯಲ್ಲಿ ಯಾವ್ಯಾವ ರೀತಿಯಲ್ಲಿ ಯಾವ್ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕೆನ್ನುವ ಬಗ್ಗೆ ಒಂದು ನಿಯಮವಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ರಾಜ್ಯಪಾಲರ ಭಾಷಣವನ್ನು.....

(ಗೊಂದಲ)

ಅಧ್ಯಕ್ಷರು:– ಹಿಂದೆ ಯಾರೋ ಏನೋ ಮಾಡಿದರು, ಅಂತ ನಾವು ಮಾಡಿದರೆ ಏನು ಇದು?

ಶ್ರೀ ವಾಟಾಳ್ ನಾಗರಾಜ್:– ರಾಜ್ಯಪಾಲರ ಭಾಷಣದ ಪ್ರತಿಯನ್ನು ಹರಿದಿದ್ದಾರೆ, ತುಳಿದಿದ್ದಾರೆ. ನನಗೆ ಅರ್ಥವಾಗಲಿಲ್ಲ? ಏನಿದು?

ಶ್ರೀ ಬಿ.ಎಸ್. ಯಡಿಯೂರಪ್ಪ:– ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿ, ಅವಕಾಶ ಮಾಡಿಕೊಟ್ಟ ಸತ್‌ಸಂಪ್ರಾದಾಯಗಳಿವೆ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಗೋಪಾಲ ಗೌಡರವರು ಇದೇ ಸ್ಥಳದಲ್ಲಿ ಒಂದು ಸಾರಿ, ಎರಡು ಸಾರಿ, ಮೂರು ಸಾರಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಾನು ಹೇಳಿದ್ದೆಲ್ಲ ನಮ್ಮ ಕಡತದಲ್ಲಿದೆ. ಅಂದರೆ, ರಾಜ್ಯಪಾಲರಿಗೆ ಮಾಡಬೇಕೆಂಬ ಉದ್ದೇಶ ಇಲ್ಲವೇ ಇಲ್ಲ.

(ಗೊಂದಲ)

ಅಧ್ಯಕ್ಷರು:– ಎಲ್ಲವನ್ನೂ ಈ ರೀತಿ ಮಾಡುತ್ತಾ ಹೋದರೆ ನಿಯಮಾವಳಿಗಳೇ ಬೇಕಾಗಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್:– ಮಾನ್ಯ ನಾಗರಾಜ್‌ರವರೆ ಹಿಂದಿನದನ್ನು ಹೇಳುತ್ತಿದ್ದೀರಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಡಿನ ಜನರು ನಮ್ಮ ಬಗ್ಗೆ ಏನು ತಿಳಿದುಕೊಳ್ಳಬೇಕು? ಬೆಂಗಳೂರಿನಲ್ಲಿ ಹಿಂದೆ ನಡೆಯದೇ ಇರುವಂಥ ಘಟನೆಗಳು ಇಲ್ಲಿ ನಡೆದಿದೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:– ಇತ್ತೀಚಿನ ಬೆಳವಣಿಗೆಗಳಲ್ಲಿ....

ಶ್ರೀ ಬಿ.ಎಸ್. ಯಡಿಯೂರಪ್ಪ:– ರಾಜ್ಯಪಾಲರು ಬಂದಾಗ ನಮ್ಮದೇ ಆದ ರೀತಿಯಲ್ಲಿ ಶಾಂತವಾಗಿ ಪ್ರತಿಭಟನೆ ನಡೆಸಿದ್ದೇವೆ. ರಾಜ್ಯಪಾಲರ ಕ್ಷಮಾಪಣೆ ಕೇಳಿ ನಾನು ಮಾತನ್ನು ಪ್ರಾರಂಭಿಸಿದ್ದೇನೆ. ಬೆನ್ನಿಹಿನ್ ಕಾರ್ಯಕ್ರಮಕ್ಕೆ ಅವಕಾಶ ಮಾಡಿ ಕೊಡಬಾರದೆಂದು ಹೇಳಿದ್ದೇನೆ.

ಶ್ರೀ ಹೆಚ್.ಕೆ. ಪಾಟೀಲ್:– ನಮ್ಮ ನಿಯಮಾವಳಿ ಪ್ರಕಾರ, ಯಾವ ರೀತಿ ನಡೆದುಕೊಳ್ಳಬೇಕೆನ್ನುವ ಬಗ್ಗೆ ಒಂದು ಸ್ಪಷ್ಟತೆ ಬಂದಿದೆ. ಅದುದರಿಂದ, ಮಾನ್ಯ ಅಧ್ಯಕ್ಷರೆ,.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಲೋಕಸಭೆ ಜಂಟಿ ಅಧಿವೇಶನ ಸಭೆ. ಅಲ್ಲಿ ರಾಷ್ಟ್ರಪತಿಗಳು ಭಾಷಣ ಮಾಡುವಾಗ ಲೋಕಸಭೆಯಲ್ಲಿ ಜಂಟಿ ಅಧಿವೇಶನದಲ್ಲಿ ಪ್ರತಿಭಟನೆಗಳು ನಡೆದಿವೆ.

(ಗೊಂದಲ)

ಶ್ರೀ ಹೆಚ್.ಕೆ. ಪಾಟೀಲ್:– ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಅನುಸರಿಸಬೇಕಾದ ಕ್ರಮ ಏನಿದೆ?

> "ಸಂವಿಧಾನದ 175 ಅಥವಾ 176ನೇ ಅನುಚ್ಛೇದದ ಮೇರೆಗೆ ವಿಧಾನ ಮಂಡಲದ ಉಭಯ ಸದನಗಳು ಸಭೆ ಸೇರುವಾಗ ಅಥವಾ 175ನೇ ಅನುಚ್ಛೇದದ ಮೇರೆಗೆ ವಿಧಾನ ಸಭಾ ಸದಸ್ಯರು ಮಾತ್ರ ಸಭೆ ಸೇರುವಾಗ, ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಯಾರೇ ಸದಸ್ಯರು ಯಾವುದೇ ಭಾಷಣ ಮಾಡುವ ಮೂಲಕ

ಅಥವಾ ಯಾವುದೇ ಕ್ರಿಯಾ ಲೋಪವೆತ್ತಿ ರಾಜ್ಯಪಾಲರ ಭಾಷಣಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ ಅಥವಾ ವಿಘ್ನವನ್ನುಂಟುಮಾಡತಕ್ಕುದಲ್ಲ ಮತ್ತು ಅಂಥ ಅಡ್ಡಿಯನ್ನು ಅಥವಾ ವಿಘ್ನವನ್ನು ಸದನದ ಆದೇಶದ ತೀವ್ರ ಉಲ್ಲಂಘನೆಯೆಂದು ಪರಿಗಣಿಸಿ ವಿಧಾನ ಸಭೆಯ ಮುಂದಿನ ಉಪವೇಶನದಲ್ಲಿ ವಿಧಾನ ಸಭಾಧ್ಯಕ್ಷರು ಆ ಬಗ್ಗೆ ಹಾಗೆ ವ್ಯವಹರಿಸತಕ್ಕದ್ದು".

ಇಷ್ಟು ಸ್ಪಷ್ಟತೆಗೆ ನಾವು ಈಗಾಗಲೇ ಬಂದಿದ್ದೇವೆ. ಆದುದರಿಂದ, ಅದು ಅಧಿಕೃತ ವಿರೋಧ ಪಕ್ಷದ ನಾಯಕರು, ವಿರೋಧ ಪಕ್ಷ, ರಾಜ್ಯಪಾಲರು ಭಾಷಣ ಮಾಡದೇ ಇರುವಂಥ ಒಂದು ಸನ್ನಿವೇಶವನ್ನು ಸೃಷ್ಟಿ ಮಾಡುವುದಾದರೆ, ಅವರ ಆರೋಗ್ಯದ ಮೇಲೆಯೂ ಪರಿಣಾಮ ಬೀರುಬಹುದಾದ ರೀತಿಯಲ್ಲಿ ನಾವು ವರ್ತನೆ ಮಾಡುವುದಾದರೆ....

(ಗೊಂದಲ)

ಯಾವ ನ್ಯಾಯಾವಿದು? ನಾವು ಯಾವ ರೀತಿಯಲ್ಲಿ ನಮ್ಮ ವರ್ತನೆಯನ್ನು ಮಾಡಬೇಕೆಂಬ ಬಗ್ಗೆ ನಾವು ಅವಲೋಕನ ಮಾಡಬೇಕು. ಸಂಸದೀಯ ವ್ಯವಹಾರಕ್ಕೆ, ಸಂಸದೀಯ ವ್ಯವಸ್ಥೆಯ ಘನತೆಗೆ ತಕ್ಕುದಾಗಿ ನಡೆದುಕೊಳ್ಳಬೇಕು.....

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ನಮ್ಮ ಪೀಠದ ಬಗ್ಗೆ, ರಾಜ್ಯಪಾಲರ ಪೀಠದ ಬಗ್ಗೆ ಗೌರವವಿದೆ. ಆದರೆ, ಇಂಥ ಅವಮಾನವನ್ನು ರಾಜ್ಯದ ಜನತೆಗೆ ಮಾಡಿದಾಗ, ಅದನ್ನು ಪ್ರತಿಭಟನೆ ಮಾಡಿದ್ದೇವೆ. ಅದು ನಮ್ಮ ಹಕ್ಕು. ನಾವು ಆ ಹಕ್ಕನ್ನು ಚಲಾಯಿಸಿದ್ದೇವೆ. ಅದಕ್ಕಿಂತ ಬೇರೆ ಇಲ್ಲ. ಇಡೀ ರಾಜ್ಯದ ಜನರ ಭಾವನೆಯದು.

ಶ್ರೀ ವಾಟಾಳ್ ನಾಗರಾಜ್:– ಅವರ ಆರೋಗ್ಯ ಕೆಟ್ಟಿದ್ದು.....

(ಗೊಂದಲ)

ಅಧ್ಯಕ್ಷರು:– ಯಾರು ಏನು ಬೇಕಾದರೂ ಮಾತನಾಡಿಕೊಳ್ಳಬಹುದು.....

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಉಪ್ಪು, ಹುಳಿ ಇಲ್ಲದಿರುವ 48 ಪುಟ ಓದಿಸಲು ಕೊಟ್ಟಿದ್ದರಿಂದ ಅವರ ಆರೋಗ್ಯ ಕೆಟ್ಟಿದ್ದು. ಸುಮಾರು 8 ಪುಟ ಕೊಟ್ಟಿದ್ದರೆ, ಅದನ್ನು ಓದಿ ಅವರ ಆರೋಗ್ಯ ಚೆನ್ನಾಗಿರುತ್ತಿತ್ತು. 40 ಪುಟ ಕೊಟ್ಟು ಓದಿ ಎಂದು ಹೇಳಿದರೆ, ಅವರು ಎಲ್ಲಿ ಓದಬೇಕು? ಏತಕ್ಕೆ ಅದು? ಏನಿದೆ ಅದರಲ್ಲಿ? ಅದನ್ನು ಏಕೆ ಓದುವುದಕ್ಕೆ ಕೊಟ್ಟಿರಿ? ಇದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. 40 ಪುಟ ಓದುವುದಕ್ಕೆ ಅದರಲ್ಲೇನಿದೆ?

ಅಧ್ಯಕ್ಷರು:– ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲ. ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮಲ್ಲಿ ಸಾಮಾನ್ಯವಾಗಿ ಏನು ಮಾಡುತ್ತಾರೆಂದರೆ....

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ನಿಯಮಾವಳಿಗಳ ಪ್ರಕಾರ, ಈ ಸದನ ನಡೆಯಬೇಕೆಂದು ನಿರ್ಧಾರವಾಗಿದೆ. ಮಾಣ್ಯ ಸಂಸದೀಯ ವ್ಯವಹಾರಗಳ ಸಚಿವರು, ನಮ್ಮ ನಿಯಮ 27ರ ಪ್ರಕಾರ, ಅದರಲ್ಲಿ ಏನು ಉದ್ಧೃತವಾಗಿದೆ ಆ ವಿಚಾರವನ್ನು

ಪ್ರಸ್ತಾಪ ಮಾಡಿದ್ದಾರೆ. ಅದೇ ರೀತಿ ನಡೆದುಕೊಳ್ಳ ಬೇಕಾದುದು ನಮ್ಮೆಲ್ಲರ ಜವಾಬ್ದಾರಿ ಎನ್ನುವ ಮಾತನ್ನು ಮುಂದಿನ ಉಪವೇಶನದಲ್ಲಿ ತಾವು ಅದನ್ನು ಪ್ರಸ್ತಾಪ ಮಾಡಿದ್ದೀರಿ. ಅಷ್ಟರಮಟ್ಟಿಗೆ ನಾವು ಅದನ್ನು ಪರಿಪಾಲಿಸ ಬೇಕಾದುದು ನಮ್ಮ ಕರ್ತವ್ಯ. ತೀವ್ರವಾದ ಭಾವನೆಗಳಿರಬಹುದು, ತಪ್ಪೇ ಆಗಿರಬಹುದು. ಆದರೆ, ಎಲ್ಲರೂ ಎಲ್ಲರಿಗಾಗಿ ಎನ್ನುವ ರೀತಿಯಲ್ಲಿ ಆದರೆ ಸಭಾ ನಡವಳಿಕೆಗಳು ಆಗುವುದಿಲ್ಲ ಎನ್ನುವ ಕಾರಣಕ್ಕಾಗಿ ನಾವೇ ರಚನೆ ಮಾಡಿಕೊಂಡಿರುವ ನಿಯಮಗಳನ್ನು ನಾವೇ ಉಲ್ಲಂಘಿಸಿದರೆ, ಯಾವ ತರಹದ ವಾತಾವರಣ ಸೃಷ್ಟಿಯಾಗಬಹುದು ಎನ್ನುವುದು ತಮ್ಮ ಮಾತಿನ ಆಶಯವಾಗಿದೆ. ಇವತ್ತು ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಬೆನ್ನಿಹಿನ್ ವಿಚಾರದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಎದ್ದು ನಿಂತಾಗ ತಮ್ಮ ಅನುಮತಿಯನ್ನು ಅವರು ಪಡೆಯಬೇಕು. ಇಂಥ ಒಂದು ಮಹತ್ವವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡುತ್ತೇವೆಂದು ಹೇಳಿ, ತಮ್ಮ ಅನುಮತಿಯನ್ನು ಪಡೆದ ನಂತರ, ಆಗ ತಾವು ತಮ್ಮ ಅನುಮತಿಯನ್ನು ಕೊಟ್ಟ ನಂತರ, ಆ ವಿಚಾರ ಪ್ರಸ್ತಾಪ ಮಾಡಿ ನನ್ನ ಆಕ್ಷೇಪಣೆ ಇಲ್ಲ. ಎರಡನೆಯದು ಬಹಳ ಮುಖ್ಯವಾಗಿರುವುದೇನೆಂದರೆ, ನಮ್ಮ ಸದನದ ನಿಯಮಗಳ ಪ್ರಕಾರ, ಪ್ರಶ್ನೋತ್ತರ ವೇಳೆಯಾದ ನಂತರ ಉಳಿದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಸಂತಾಪ ಸೂಚನೆಯಾದ ನಂತರ, ತಾವು ಪ್ರಶ್ನೋತ್ತರ ವೇಳೆಯನ್ನು ಕೈಗೆತ್ತಿಕೊಳ್ಳಬೇಕಾಗಿತ್ತು. ಆದಾದನಂತರ, ಅವರೇ ನಿಯಮ 60ರ ಕೆಳಗೆ ಇವತ್ತು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದಾರೆ. ಕುಡಿಯುವ ನೀರಿನ ವಿಚಾರದಲ್ಲಿ ಅವರು ಒಂದು ನಿಲುವಳಿ ಸೂಚನೆ ಕಳುಹಿಸಿಕೊಟ್ಟ ಮೇಲೆ ಮತ್ತೆ 60ರ ನಿಯಮದ ಪ್ರಕಾರ ನಿಲುವಳಿ ಸೂಚನೆ ಕಳುಹಿಸಿ ಕೊಡುವ ಮಹತ್ವ ಏನಿದೆ ಎಂದರೆ, ಅತ್ಯಂತ ಮಹತ್ವವಾದ, ಜರೂರಾಗಿರುವ ಕಾರ್ಯವಾಗಿರುವುದರಿಂದ, ಪ್ರಶ್ನೋತ್ತರ ವೇಳೆಯನ್ನು ಬದಿಗಿರಿಸಿ ಅದನ್ನು ವಿಚಾರಕ್ಕೆ ತೆಗೆದುಕೊಳ್ಳಬಹುದು ಅಥವಾ ಪ್ರಶ್ನೋತ್ತರ ವೇಳೆಯಾದ ನಂತರ ಬೇರೆ ಕಲಾಪಗಳನ್ನು ಬದಿಗಿರಿಸಿ, ಈ ವಿಚಾರಗಳನ್ನು ಪ್ರಸ್ತಾಪ ಮಾಡಬಹುದು ಎನ್ನುವುದಿದ್ದಾಗ, ಬೆನ್ನಿಹಿನ್ ವಿಚಾರವೇ ಬಹಳ ಪ್ರಖ್ಯಾತವಾಗಿರುವುದಿಲ್ಲ. ಆ ಕಾರಣಕ್ಕಾಗಿ ವಿರೋಧ ಪಕ್ಷದ ನಾಯಕರಿಗೆ ವಿನಂತಿಸುತ್ತೇನೆ, ತಾವು ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಿ. ಅದಕ್ಕೆ ತಮಗೆ ಅಧಿಕಾರವಿದೆ. ಆದರೆ, ನಿಯಮಗಳ ಪ್ರಕಾರವಾದರೆ, ನಾವಿಲ್ಲಿ ಹಾಕಿಕೊಂಡಿರುವ ಕಾರ್ಯಕ್ರಮಗಳ ಪ್ರಕಾರ ಆಗಬೇಕಾಗುತ್ತದೆ. ತಾವು ಅತ್ಯಂತ ಮಹತ್ವವಾದ ವಿಚಾರ ವಿದ್ದರೆ, ಅವರ ಅಪ್ಪಣೆ ಪಡೆದು ತಾವು ಹೇಳಬಹುದು. ನಿಲುವಳಿ ಸೂಚನೆ ಕೊಟ್ಟ ನಂತರ ಪ್ರಶ್ನೋತ್ತರ ವೇಳೆ ನಮ್ಮಲ್ಲಿರುವ ಸಂದರ್ಭಗಳಲ್ಲಿ ನಾವು ಹೊಸ ಸಂಪ್ರದಾಯಗಳನ್ನು ಸೃಷ್ಟಿ ಮಾಡುವುದು ಬೇಡ ಎನ್ನುವ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಮನೆಯಲ್ಲಿ ನಿಯಮಗಳ ಚೌಕಟ್ಟಿನಲ್ಲಿ ನಾವು ಕೆಲಸ ಮಾಡದಿದ್ದರೆ, ಅಧ್ಯಕ್ಷರು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ. ಅವರ ತೀರ್ಮಾನಗಳು ಅಂತಿಮ. ಅದರಲ್ಲಿ ಎರಡು ಮಾತಿಲ್ಲ. ನೀವು ಹೇಳಿದ ಹಾಗೆ, ನಾವು ಪ್ರತಿಪಕ್ಷದವರು ಸೇರಿ ನಿಲುವಳಿ ಸೂಚನೆ ಮಾಡಿರುವುದು ಹೌದು. ಅದು ಬಹಳ ಮಹತ್ತರವಾದ ವಿಚಾರ. ಚರ್ಚೆಯಾಗಬೇಕು, ತಾವು ಅನುಭವಿಗಳು. ಇಲ್ಲಿ ವಿರೋಧಪಕ್ಷದಲ್ಲಿದ್ದಿರಿ. ಇವತ್ತು ಆಡಳಿತ ಪಕ್ಷದಲ್ಲಿದ್ದೀರಿ. ಅನೇಕ ಜನ ಎರಡೂ ಕಡೆ ಕೆಲಸ ಮಾಡಿದವರಿದ್ದಾರೆ. ಹೆಚ್.ಕೆ. ಪಾಟೀಲರು ಹಿರಿಯರು ಇಲ್ಲಿದ್ದಾರೆ. ಪಿ.ಜಿ.ಆರ್. ಸಿಂಧ್ಯಾರವರು ಈ ಭಾಗದಲ್ಲಿ ಕೆಲಸ ಮಾಡಿದವರು ಇದ್ದಾರೆ. ಅದು ಎಷ್ಟು ಬಾರಿ ಈ ಮನೆಯಲ್ಲಿ

ಮಹತ್ತರವಾದ ವಿಷಯಗಳು ಬಂದಾಗ, ಕ್ವೊಶ್ಚನ್ ಹವರ್ ಅನ್ನು ಸಸ್ಪೆಂಡ್ ಮಾಡಿ ಸನ್ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟು ದಿವಸಗಟ್ಟಲೆ ಚರ್ಚೆ ಮಾಡಿದ ಇತಿಹಾಸ, ಸತ್ಸಂಪ್ರದಾಯ ಈ ಮನೆಯಲ್ಲಿದೆ. ನಾನು ಅಧ್ಯಕ್ಷರ ಕೊಠಡಿಯಲ್ಲಿ ವಿನಂತಿಸಿದ್ದೆ. ಬೆನ್ನಿಹಿನ್ ಕಾರ್ಯಕ್ರಮದ ಬಗ್ಗೆ ಅನೇಕ ಮಹತ್ತರವಾದ ವಿಷಯಗಳು ಇತ್ತೀಚೆಗೆ ನಮಗೆ ಮಾಹಿತಿ ಸಿಕ್ಕಿರುವುದರಿಂದ, ಈ ಸದನದ ಕಾರ್ಯಕಲಾಪವನ್ನು, ಕ್ವೊಶ್ಚನ್ ಹವರ್ ಅನ್ನು ಸಸ್ಪೆಂಡ್ ಮಾಡಿ, ಈ ಮಹತ್ತರವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ವಿನಂತಿಸಿ, ಆ ಮನೆಯಲ್ಲಿ ಈಗಾಗಲೇ ಪ್ರಾರಂಭವಾಗಿರುವುದರಿಂದ ಈ ವಿಷಯಗಳ ಮಹತ್ವ ಕಡಿಮೆಯಾಗಬಹುದೆನ್ನುವ ದೃಷ್ಟಿಯಿಂದ ನಾನು ಎದ್ದು ನಿಂತು ಮಾತನಾಡುವುದಕ್ಕೆ ಪ್ರಾರಂಭ ಮಾಡಿದಾಗ, ಸನ್ಮಾನ್ಯ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆಂದು ಚರ್ಚೆಯನ್ನು ಪ್ರಾರಂಭಿಸಿದೆ. ನಾನು ಮುಖ್ಯಮಂತ್ರಿಗಳಿಗೆ ವಿನಂತಿಸುತ್ತೇನೆ, ತಾವೇ ಸಲಹೆ ಕೊಡಿ. ಇವತ್ತು ಇಂಥ ಮಹತ್ತರವಾದ ವಿಷಯ ಇಡೀ ನಾಡಿನ ಜನ ಸರಿತಪ್ಪುಗಳ ಬಗ್ಗೆ ಚರ್ಚೆ ಮಾಡುತ್ತಿರಬೇಕಾದರೆ, ಇಡೀ ಜಗತ್ತನ್ನೇ ಆಕರ್ಷಣೆ ಮಾಡಿರುವ ಬೆನ್ನಿಹಿನ್ ಹಗರಣ ನಾನು ನಿಮ್ಮನ್ನು ಕೇಳುತ್ತೇನೆ, ಪ್ರತಿಪಕ್ಷ, ಕಾನೂನು ಎಲ್ಲಾ ಹೇಳಿದಿರಿ. ನಮ್ಮನ್ನು ಕರೆಯಬಹುದಾಗಿತ್ತಲ್ಲಾ. ಈ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ನಡೆಯುತ್ತಿದೆ, ಇದನ್ನು ಮಾಡುತ್ತಿದ್ದೇವೆ. ಏನಾದರೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತಲ್ಲವೇ?

(ಗೊಂದಲ)

ನೀವು ಸರ್ವಾದೀಕಾರಿಗಳೇನ್ರಿ? ನೀವು ಸರ್ವಾಧಿಕಾರಿ ವ್ಯವಸ್ಥೆಯಲ್ಲಿಲ್ಲ. ನೀವು ಪ್ರಜಾತಂತ್ರ ವ್ಯವಸ್ಥೆಯಲ್ಲಿದ್ದೀರಿ. ಸಿಂಗಲ್ ಲಾರ್ಜೆಸ್ಟ ಪಾರ್ಟಿ ಆಗಿ ಪ್ರತಿಪಕ್ಷದವರು ನಾವಿರಬೇಕಾದರೆ, ಈ ರೀತಿಯಾದ ಕಾರ್ಯಕ್ರಮವನ್ನು ತೀರ್ಮಾನ ಮಾಡುವ ಸಂದರ್ಭದಲ್ಲಿ ನಮ್ಮನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವಾಗಬೇಕೆಂದು ನಾನು ಸಲಹೆ ಕೊಡುತ್ತಿದ್ದೇನೆ. ಇಲ್ಲ, ನಾವು ಖುಷಿ ಬಂದಂತೆ ಮಾಡುತ್ತೇವೆಂದು ಹೇಳಿದರೆ ನಿಮಗೆ ಬಿಟ್ಟಿದ್ದು. ಆದರೆ ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ರಾಜ್ಯದ ಮುಖ್ಯಮಂತ್ರಿಗಳು ಬೆನ್ನಿಹಿನ್ ಕಾರ್ಯಕ್ರಮಕ್ಕೆ ಹೋಗಿ, ಆ ಗುಡಿಸಲುಗಳಲ್ಲಿ ವಾಸ ಮಾಡುವಂಥ ಜನ ನಾನು ಮುಟ್ಟಿದ ತಕ್ಷಣ ನೀವು ಲಕ್ಷಧೀಶ್ವರರು ಆಗುವುದಾದರೆ ನಿಮ್ಮ ಆರೋಗ್ಯ ಸುಧಾರಣೆಯಾಗುತ್ತದೆ ಎಂದು ಹೇಳುವುದಾದರೆ, ಆ ಮುಗ್ಧರು ಹೋಗಿ ಮತಾಂತರ ಹೊಂದುವುದಕ್ಕೆ ನೀವು ಅವಕಾಶ ಮಾಡಿಕೊಡುತ್ತೀರಾ? ಇದನ್ನು ನಾವು ಇಲ್ಲಿ ಒಪ್ಪಬೇಕೇ? ಹಾಗೂ ಪ್ರಭಾವಿ ವ್ಯಕ್ತಿಗಳನ್ನು ಕರೆದುಕೊಂಡು ಬಂದು, ಅಮೇರಿಕ ಗೂಡಾಚಾರ್ಯದ ವಿಭಾಗದವರನ್ನು ಕರೆದುಕೊಂಡು ಬಂದು ಈ ದೇಶವನ್ನು ಮತಾಂತರ ಮಾಡುವುದನ್ನು ನೀವು ಒಪ್ಪುತ್ತೀರಾ? ವಿಗ್ರಹಾರಾಧನೆ ಇದು ವ್ಯಭಿಚಾರಕ್ಕೆ ಸಮ ಎಂದು ಹೇಳಿರುವಂಥದ್ದನ್ನು ನೀವು ಒಪ್ಪುತ್ತೀರಾ? ಈ ನಾಡಿನ ಜನರಿಗೆ ಅಪಮಾನವಾಗುವುದನ್ನು ಸಹಿಸಬೇಕು ಎಂದು ಹೇಳುತ್ತೀರಾ? ನಾನು ನಿಮ್ಮಲ್ಲಿ ಇಷ್ಟೇ ಹೇಳುವುದು, ನಿಮ್ಮ ಮಾತಿಗೆ ನಾವು ಗೌರವ ಕೊಡುವುದಕ್ಕೆ ಸಿದ್ಧ ಇದ್ದೇವೆ, ಯಾವ ರೀತಿ ಚರ್ಚೆಯಾಗಬೇಕು, ಯಾವ ರೀತಿ ತೆಗೆದುಕೊಳ್ಳುತ್ತೀರಾ ಎಂಬುದನ್ನು ತಾವು ದಯಮಾಡಿ ನಮಗೆ ತಿಳಿಸಬೇಕು.

ಅಧ್ಯಕ್ಷರು:– ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಎಲ್ಲರೂ ಒಂದೇ ಸಾರಿ ಮಾತನಾಡಿದರೆ ಹೇಗೆ? ಈಗ ವಿಚಾರ ಏನೆಂದರೆ, ಮಾನ್ಯ ಯಡಿಯೂರಪ್ಪನವರೇ, ನೀವು ನನ್ನ ಕಛೇರಿಗೆ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡುತ್ತೇನೆಂದು ಪತ್ರ ಕಳುಹಿಸಿಕೊಟ್ಟಿದ್ದೀರಿ, ಅದರಲ್ಲಿ ಏನು ಅಂದರೆ,

ಪ್ರಶ್ನೋತ್ತರಕ್ಕೆ ಮೊದಲೇ ಅದು ಇದು ಏನೂ ಇಲ್ಲ, ಬಂದು ತಾವು ಹೇಳಿದಿರಿ ಅಷ್ಟೆ. ನಾನು ಈಗ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ, ದಯಮಾಡಿ ಸಹಕರಿಸಬೇಕು, ಪ್ರಶ್ನೋತ್ತರ ವೇಳೆಯಾದ ಮೇಲೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ತಾವು ಅಷ್ಟು ಹೇಳಿದರೆ ಆಗಬಹುದು.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಆ ನಿಲುವಳಿ ಸೂಚನೆ ಏನಾಯಿತು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಈಗ ನಿಲುವಳಿ ಸೂಚನೆಯ ಮಹತ್ವ ಹೊರಟು ಹೋಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೋಡಿ, ನೋಡಿ, ನಿಮ್ಮನ್ನೇ ಪ್ರಶ್ನೆ ಮಾಡುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):– ಮಾನ್ಯ ಅಧ್ಯಕ್ಷರೆ, ಒಂದೇ ಸಮಯದಲ್ಲಿ ಎರಡು ವಿಚಾರಗಳನ್ನು ಎತ್ತಲಿಕ್ಕೆ ಆಗುವುದಿಲ್ಲ,

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಒಪ್ಪುವುದಿಲ್ಲ ನಿಮ್ಮ ಪರ್ಮಿಷನ್ ತೆಗೆದುಕೊಂಡ ಮೇಲೆ ಕ್ವೊಶ್ಚನ್ ಏಕೆ ಮಾಡುತ್ತೀರಿ? ಸಾರ್, ಈ ಸದನ ಶಾಂತವಾಗಿ ನಡೆಯಬೇಕು.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ, ತಾವೇ ಕಳುಹಿಸಿರುವ ಸೂಚನೆ ಒಂದು ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಹೌದು ಬೆನ್ನಿಹಿನ್ ಅದು ಅದನ್ನೇ ತೆಗೆದುಕೊಳ್ಳೋಣ ಬೇರೆ ವಿಚಾರ ಬೇಡ.

ಅಧ್ಯಕ್ಷರು:– ನೋ ನೋ ನಾನು ಹೇಳುವುದು ನಿಲುವಳಿ ಸೂಚನೆ ಮಾಡಲು ತೆಗೆದುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಸಾರ್ ಅದು ಆ ರೀತಿ ಆಗುವುದಿಲ್ಲ. ಈಗ ನೀವು ಒಪ್ಪಿಕೊಂಡು ಈ ರೀತಿ ಮಾಡಿದರೆ ಹೇಗೆ?

ಅಧ್ಯಕ್ಷರು:– ಅದು ಆ ರೀತಿ ಅಲ್ಲ, ದಯಮಾಡಿ ಕೇಳಿ ನಿಯಮದ ಪ್ರಕಾರ, ನೀವು ಕಳುಹಿಸಿರತಕ್ಕಂಥದ್ದು, ಅದಕ್ಕೂ ಆ ಬೆನ್ನಿಹಿನ್‌ಗೂ ಅವಕಾಶ ಮಾಡಿಕೊಡುತ್ತೇನೆ. ಆದರೆ ದಯಮಾಡಿ ನನ್ನ ಮಾತನ್ನು ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಅದಕ್ಕೆ ಇಷ್ಟು ಸಮಯ ಎಂದು ನಿಗದಿ ಮಾಡಿ. ಬೆನ್ನಿಹಿನ್ ವಿಚಾರ ಬಹಳ ಮಹತ್ವವಾಗಿರುವ ವಿಚಾರ. ಅವನು ಊರು ಬಿಟ್ಟು ಹೊರಟು ಹೋಗುವುದಕ್ಕಿಂತ ಮುಂಚೆ ಬಂಧನ ಮಾಡಬೇಕು. ತಕ್ಷಣ ಅವನನ್ನು ಅರೆಸ್ಟ್ ಮಾಡಬೇಕು ಎಂದು ಸೂಚನೆ ಕೊಡಿ. ಅವನು ದೇಶ ಬಿಟ್ಟು ಹೋಗುವುದರೊಳಗಾಗಿ ಅರೆಸ್ಟ್ ಮಡಿಸುತ್ತೇವೆಂದು ಹೇಳಿ. ಡೈರೆಕ್ಷನ್ಸ್ ಕೊಡಿ ನಾನು ಕುಳಿತುಕೊಳ್ಳುತ್ತೇನೆ. ನಾಳೆ ಬೇಕಾದರೆ ಚರ್ಚೆಗೆ ತೆಗೆದುಕೊಳ್ಳಲಿ, ದೇಶ ಬಿಟ್ಟು ಹೋಗುವುದರೊಳಗೆ ಜನತೆಯನ್ನು ವಂಚಿಸಿರುವ ಆ ಬೆನ್ನಿಹಿನ್‌ನನ್ನು ಅರೆಸ್ಟ್ ಮಾಡಬೇಕು, ಸುಪ್ರೀಂಕೋರ್ಟಿನ ನಿವೃತ್ತ ಜಡ್ಜೆ ಒಬ್ಬರಿಂದ ತನಿಖೆಗೆ ಅವಕಾಶವಾಗಬೇಕು.

ಅಧ್ಯಕ್ಷರು:– ಒಂದು ನಿಲುವಳಿ ಸೂಚನೆ ಇರುವುದರಿಂದ ಅದು ಮುಗಿದ ಮೇಲೆ ಅವಕಾಶ ಕೊಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ಅವನು ದೇಶಬಿಟ್ಟು ಹೋಗುವುದರೊಳಗೆ ಬಂಧಿಸುವಂತೆ ಡೈರೆಕ್ಷನ್ ಕೊಡಿ, ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು:– ಆಯಿತು, ನಾನು ಭರವಸೆ ಕೊಡುತ್ತೇನೆ. ಮೊದಲು ಪ್ರಶ್ನೋತ್ತರ ಮುಗಿಯಲಿ ನಂತರ ನೋಡೋಣ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಅಧ್ಯಕ್ಷರೆ ಪ್ರಶ್ನೋತ್ತರ ಬದಿಗೊತ್ತಿ ಮಹತ್ತರವಾಗಿರುವ ವಿಚಾರಗಳನ್ನು ತೆಗೆದುಕೊಂಡಿರತಕ್ಕಂಥ ಉದಾಹರಣೆಗಳು ಇವೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ತಾವು ಅಪ್ಪಣೆ ಕೊಡಿಸಿದ್ದೀರಿ. ಪ್ರಶ್ನೋತ್ತರವೇಳೆ ಜರುಗಲಿ ಎಂದು ಹೇಳಿದ್ದೀರಿ. ಆದಾದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳತಕ್ಕಂಥದ್ದು ಧರ್ಮ ಅದರ ಪ್ರಕಾರ ನಡೆಯಲಿ ನಮ್ಮ ಯಾರದ್ದೂ ಆಕ್ಷೇಪಣೆ ಇಲ್ಲ. ಬೇರೆ ವಿಚಾರ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಿಯಾಮಾವಳಿಯಂತೆ ಪ್ರಶ್ನೋತ್ತರ ಮುಗಿದಾದ ಮೇಲೆ ಬೆನ್ನಿಹಿನ್ ವಿಚಾರ ತೆಗೆದುಕೊಂಡು ನಂತರ ನಾವು ಕಳುಹಿಸಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವಿರಂತೆ. ತಾವು ದಯಮಾಡಿ ಈಗ ಪ್ರಶ್ನೋತ್ತರ ಪ್ರಾರಂಭಿಸಿ.

ಅಧ್ಯಕ್ಷರು:– (ನಗು) ಒಬ್ಬೊಬ್ಬರು ಒಂದೊಂದು ರೀತಿ ಹೇಳಿದರೆ ಹೇಗೆ? ನಿಮ್ಮ ಸಹಕಾರ ಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಮ್ಮ ಸಹಕಾರ ಯಾವಾಗಲೂ ಇದ್ದೇ ಇರುತ್ತದೆ ನೀವು ನಮಗೆ ಅವಕಾಶ ಮಾಡಿಕೊಡಬೇಕು. ಇದು ಪ್ರಮುಖವಾದ ವಿಚಾರವಾಗಿರುವುದರಿಂದ ಶೂನ್ಯವೇಳೆಯಲ್ಲಿ ಆದರೂ ನಮಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:– ಮಾನ್ಯ ಯಡಿಯೂರಪ್ಪನವರೇ, ಇದು ನೀವು ಕಳುಹಿಸಿರುವ ನಿಲುವಳಿಸೂಚನೆಯಾಗಿದೆ. ಇದನ್ನು ತೆಗೆದುಕೊಂಡು ಚರ್ಚೆ ಮಾಡೋಣ. ನಂತರ ಅದನ್ನು ಮುಂದೆ....

ಶ್ರೀ ವಾಟಾಳ ನಾಗರಾಜ್:– ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ನಿಲುವಳಿ ಸೂಚನೆಯನ್ನು ನಾವು ಏನು ಕಳುಹಿಸಿದ್ದೇವೆ, ಅದು ಚರ್ಚೆಯಾಗಲಿ.

ಅಧ್ಯಕ್ಷರು:– ಆಯಿತು ಮೊದಲು ಪ್ರಶ್ನೋತ್ತರ ಮುಗಿಯಲಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಅಧ್ಯಕ್ಷರು ತಮ್ಮ ಅಭಿಪ್ರಾಯದಂತೆ ಈ ಸಭೆ ನಡೆಯಬೇಕಾಗುತ್ತದೆ, ತಾವು ಏನು ಹೇಳುತ್ತಿರೋ ಅದು ಇಲ್ಲಿ ಅಂತಿಮವಾಗುತ್ತದೆ, ಹೀಗಿರುವಾಗ ತಾವು (ಸಭಾಧ್ಯಕ್ಷರು) ತಮ್ಮ ಅಭಿಪ್ರಾಯವನ್ನು ಸಂಪೂರ್ಣವಾಗಿ ಹೇಳಬೇಕು. ತಾವು ದಯಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಸನ್ಮಾನ್ಯ ಸಭಾಧ್ಯಕ್ಷರು ಈಗಾಗಲೇ ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ.

ಅಧ್ಯಕ್ಷರು:– ದಯಮಾಡಿ ಕುಳಿತುಕೊಳ್ಳಿ, ಎಲ್ಲರೂ ಈ ರೀತಿ ಹೇಳಿದರೆ ಹೇಗೆ? ವಾಟಾಳ್ ನಾಗರಾಜ್‌ರವರೇ, ದಯಮಾಡಿ ಕುಳಿತುಕೊಳ್ಳಿ. ಎಲ್ಲರೂ ಒಟ್ಟಿಗೆ ಮಾತನಾಡತಕ್ಕಂಥದ್ದು ಸರಿಯಲ್ಲ. ನಾನು ಏನು ಹೇಳಿದೆ ಎಂದರೆ, ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ ನಂತರ ಬೇರೆ ವಿಚಾರ ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ. ಒಂದೊಂದು ವಿಚಾರ ಆಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನೀವು ನಮಗೆ ಅವಕಾಶ ಮಾಡಿಕೊಡಬೇಕು, ಈಗಾಗಲೇ ಆ ವಿಷಯ ಮೇಲ್ಮನೆಯಲ್ಲಿ ಚರ್ಚೆಯಾಗುತ್ತಿರುವುದರಿಂದ, ಆ ವಿಷಯದ ಮಹತ್ವ ಕಳೆದುಕೊಳ್ಳಬಾರದು ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಉದ್ದೇಶ ನಮಗೆ ಇಲ್ಲ. ದಯಮಾಡಿ ನಮಗೆ ಶೂನ್ಯವೇಳೆಯಲ್ಲಾದರೂ ಅವಕಾಶ ಮಾಡಿಕೊಡಿ, ಏಕೆಂದರೆ, ಹಿಂದೆ ಕೂಡ ಈ ರೀತಿ ಗಂಟೆಗಟ್ಟಲೆ ವಿಚಾರ ಚರ್ಚೆಯಾಗಿರತಕ್ಕಂಥ ಉದಾಹರಣೆಗಳು ನಮ್ಮಲ್ಲಿ ಇವೆ. ಹೀಗಾಗಿ ನೀವು ನಮಗೆ ಅವಕಾಶ ಕೊಡಬೇಕು..

ಅಧ್ಯಕ್ಷರು:– ಆಯಿತು ಮೊದಲು ಪ್ರಶ್ನೋತ್ತರ ಮುಗಿಯಲಿ ನಂತರ ನೋಡೋಣ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):– ಮಾನ್ಯ ಅಧ್ಯಕ್ಷರೆ, ಈ ಮನೆಯ ಸದಸ್ಯರಾಗಿರುವ ನಮಗೆ ಕೆಲವೊಂದು ಹಕ್ಕುಗಳು ಇವೆ. ನಮಗೆ ತಾವು ಈ ದಿವಸದ ಕಾರ್ಯಕಲಾಪದ ಪಟ್ಟಿ ಕಳುಹಿಸಿಕೊಟ್ಟಿದ್ದೀರಿ. ಈಗ ಸಂತಾಪ ಸೂಚಕದ ನಿರ್ಣಯದ ಮೇಲೆ ಚರ್ಚೆಯಾಗಿದೆ, ಈಗ ಪ್ರಶ್ನೋತ್ತರ ತೆಗೆದುಕೊಳ್ಳುತ್ತಿದ್ದೀರಿ, ಪ್ರಶ್ನೋತ್ತರ ಮುಗಿದ ಮೇಲೆ ನಮ್ಮ ನಿಯಾಮಾವಳಿಯ ಪ್ರಕಾರ ಯಾವುದಾದರೂ ನಿಲುವಳಿ ಸೂಚನೆ ತಮ್ಮ ಕಛೇರಿಗೆ ಬಂದಿದ್ದರೆ, ಆ ನಿಲುವಳಿ ಸೂಚನೆ ಇತ್ಯರ್ಥವಾಗ ಬೇಕು. ನಿಲುವಳಿ ಇತ್ಯರ್ಥವಾದ ಮೇಲೆ, ಬೇರೆ ವಿಷಯ ನೀವು ಪ್ರಸ್ತಾಪ ಮಾಡಬಹುದೇ ಹೊರತು ಮಾನ್ಯ ವಿರೋಧ ಪಕ್ಷದ ನಾಯಕರು ಸೂಚನೆ ಮಾಡುವುದು ಅದನ್ನು ತಾವು ಒಪ್ಪಿಕೊಳ್ಳುವುದರಿಂದ ನಿಲುವಳಿ ಸೂಚನೆಯನ್ನು ಪಕ್ಕಕ್ಕೆ ಇಟ್ಟು ಮತ್ತೊಂದು ವಿಚಾರ ಮಹತ್ವದ ವಿಚಾರ ಎಂದು ತೆಗೆದುಕೊಳ್ಳುವುದಕ್ಕೆ ಅವಕಾಶ ನಿಯಾಮಾವಳಿಗಳಲ್ಲಿ ಇರುವುದಿಲ್ಲ. ದಯಮಾಡಿ ನಾನು ಅತ್ಯಂತ ನಮ್ರತೆಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಈ ಪ್ರಶ್ನೋತ್ತರ ಅಗತ್ಯ ಅದು ಆಗಬೇಕು, ಅದು ಆದ ತಕ್ಷಣ ನಿಲುವಳಿ ಸೂಚನೆ ಇತ್ಯರ್ಥವಾದ ಮೇಲೆ ಬೇರೆ ವಿಚಾರ ಪ್ರಸ್ತಾಪವಾಗಬೇಕೇ ಹೊರತು ಬೇರೆ ಹಾಗೆ ಮಾಡಲಿಕ್ಕೆ ಬರುವುದಿಲ್ಲವೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಇದೇ ಮಾನ್ಯ ರಮೇಶ್ ಕುಮಾರ್ ರವರು ಅಧ್ಯಕ್ಷ ಪೀಠದಲ್ಲಿ ಕುಳಿತಿರುವ ಸಮಯದಲ್ಲಿ, ಒಂದು ನಿಮಿಷ ಇಲ್ಲಿ ರೂಲ್ ಪ್ರಶ್ನೆ ಬಂದಿದೆ.. ಏಕೆಂದರೆ ನಾವು ಸತ್ ಸಂಪ್ರದಾಯದಂತೆ ಇಡೀ ದೇಶಕ್ಕೆ ಮಾದರಿಯಾಗಿ ಈ ಸದನ ನಡೆದುಕೊಂಡು ಬರುತ್ತಿದೆ. ಆ ಜಾಗದಲ್ಲಿ ಕುಳಿತಂಥ ಅನೇಕ ಜನ ಹಿರಿಯ ಅಧ್ಯಕ್ಷರುಗಳು, ವಿಷಯದ ಮಹತ್ವವನ್ನು ಅರಿತುಕೊಂಡು, ಎಲ್ಲಾ ಕಾನೂನನ್ನು ಬದಿಗೊತ್ತಿ, ಪ್ರಶ್ನೋತ್ತರವೇಳೆಯನ್ನು ಸಸ್‌ಪೆಂಡ್ ಮಾಡಿ ಅವಕಾಶ ಮಾಡಿಕೊಟ್ಟಂಥ ನೂರಾರು ಉದಾಹರಣೆಗಳು ಇವೆ. ಮಾನ್ಯ ರಮೇಶ್ ಕುಮಾರ್ ರವರೇ ಇಲ್ಲಿ ಅಧ್ಯಕ್ಷರಾಗಿ ಕುಳಿತಾಗ ಈ ರೀತಿ ನಾವು ಸೂಚನೆಗಳನ್ನು ಕಳುಹಿಸಿದ್ದರೂ, ನಿಲುವಳಿ ಸೂಚನೆಗಳು ಇದ್ದರೂ ಸಹ, ಶೂನ್ಯ ವೇಳೆಯಲ್ಲಿ ಅನೇಕ ಪ್ರಮುಖ ವಿಚಾರಗಳು ಗಂಟೆಗಟ್ಟಲೆ ಚರ್ಚೆಯಾಗಿರುವಂಥದ್ದು ಇದೆ. ಇವತ್ತು ಪ್ರತಿಪಕ್ಷವಾಗಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಪ್ರಶ್ನೋತ್ತರ ತೆಗೆದುಕೊಳ್ಳುವುದಕ್ಕೆ ನಮ್ಮ ಅಭ್ಯಂತರವಿಲ್ಲ. ನಾನು ಏಕೆ ಇದನ್ನು ಪ್ರಸ್ತಾಪ ಮಾಡಿದೆ, ಬೆನ್ನಿಹಿನ್ ದೇಶ ಬಿಟ್ಟು ಹೋಗಬಾರದೆನ್ನುವ ಭಯದಿಂದ ನಾನು ಪ್ರಸ್ತಾಪ ಮಾಡಿದೆ. ನೀವು ಅಶ್ಯೂರೆನ್ಸ್ ಕೊಟ್ಟಿದ್ದೀರಿ, ಅವನನ್ನು ಬಂಧನ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತೇವೆ, ಸೂಚನೆ ಕಳುಹಿಸುತ್ತೇವೆ ಅಂತ.. ಈ ಹಿನ್ನೆಲೆಯಲ್ಲಿ ಶೂನ್ಯವೇಳೆಯಲ್ಲಿ ಅದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ, ನಾವು ಚರ್ಚೆ ಮಾಡಲಿಕ್ಕೆ ಸದಸ್ಯರು ಸಿದ್ಧರಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ):– ಮಾನ್ಯ ಅಧ್ಯಕ್ಷರೆ, ಅವರೇ ಮೂವ್ ಮಾಡಿರುವಂಥ ನಿಲುವಳಿ ಸೂಚನೆಯನ್ನು ಅವರೇ ಬೇಡ ಎಂದು ಹೇಳುವುದು ಇದು ಒಂದು ದುರಂತ.

ಶ್ರೀ ಬಿ.ಎಸ್. ಯಡಿಯೂರಪ್ಪ:– ವಿರೋಧ ಪಕ್ಷದಲ್ಲಿ ಇದ್ದು ಅವರು ಅದನ್ನು ಹೇಳವುದು ಬೇಡ.

ಅಧ್ಯಕ್ಷರು:– ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ:– ಅವರೇ ನಿಲುವಳಿ ಸೂಚನೆಯ ನೋಟೀಸ್‌ನ್ನು ಕೊಟ್ಟು, ಅವರೇ ಬೇರೆ ವಿಷಯ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಸರಿಯಾಗಿ ಇರುವುದಿಲ್ಲವೆಂಬುದು ನನ್ನ ಅಭಿಪ್ರಾಯ.

ಅಧ್ಯಕ್ಷರು:– ಮೊದಲು ಪ್ರಶ್ನೋತ್ತರ ಮುಗಿಸೋಣ. ಶ್ರೀ ಎಂ.ಪಿ. ರೇಣುಕಾಚಾರ್ಯರವರು...

3. ಪ್ರಶ್ನೋತ್ತರವೇಳೆ

ಅ. ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಬೇಲೂರು–ಹೊನ್ನಾಳಿ ಮಧ್ಯೆ ಸೇತುವೆ ಶಿಥಲಗೊಂಡಿರುವ ಬಗ್ಗೆ

1(565) ಶ್ರೀ ರೇಣುಕಾಚಾರ್ಯ ಎಂ.ಪಿ.(ಹೊನ್ನಾಳಿ)) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೇಲೂರು–ಹೊನ್ನಳಿ ಮಧ್ಯೆಯಿರುವ ಶಿಥಿಲಗೊಂಡಿರುವ ಸೇತುವೆಗಳ ಸಂಖ್ಯೆ ಎಷ್ಟು;

ಆ) ಈ ಸೇತುವೆಯಲ್ಲಿ ಅಪಘಾತ ಸಂಭವಿಸಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಬಂದಿದೆಯೇ;

ಇ) ಹಾಗಿದ್ದಲ್ಲಿ ಶಿಥಿಲಗೊಂಡ ಈ ಸೇತುವೆಗಳ ನಿರ್ಮಾಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಎಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೇಲೂರು–ಹೊನ್ನಾಳಿ ರಸ್ತೆಯ ಭಾಗದಲ್ಲಿ 7 ಸೇತುವೆಗಳಿದ್ದು, ಇವುಗಳಲ್ಲಿ 5 ಸೇತುವೆ ಶಿಥಿಲಗೊಂಡಿತ್ತು.

ಆ) ಬಂದಿರುವುದಿಲ್ಲ.

ಇ) ಹೊನ್ನಾಳಿ–ಶಿವಮೊಗ್ಗ ರಸ್ತೆಯ ಪುನಃಶ್ಚೇತನ ಕಾಮಗಾರಿಯ ಅಡಿಯಲ್ಲಿ ಶಿಥಿಲಗೊಂಡಿದ್ದ 5 ಸೇತುವೆಗಳನ್ನು ನಿರ್ಮಾಣ ಹಾಗೂ ದುರಸ್ಥಿ ಮಾಡಲಾಗಿದೆ.

ಶ್ರೀ ಎಂ.ಪಿ. ರೇಣುಕಾಚಾರ್ಯ:– ಸನ್ಮಾನ್ಯ ಸಭಾಧ್ಯಕ್ಷರೆ, ಶಿಥಿಲಗೊಂಡಿದ್ದ 5 ಸೇತುವೆಗಳನ್ನು ದುರಸ್ಥಿ ಮಾಡಲಾಗಿದೆ ಎಂದು ಈ ಸದನಕ್ಕೆ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟು ಸದನಕ್ಕೆ ಅಗೌರವ ತೋರಿಸಿದ್ದಾರೆ. ನೆನ್ನೆದಿವಸ ನಾನು ಸದರಿ ಸೇತುವೆಗಳ ಫೋಟೋ ತೆಗೆದು ಇಲ್ಲಿಗೆ ತಂದಿರುತ್ತೇನೆ. ಈ ಸೇತುವೆಗಳು ಸಂಪೂರ್ಣವಾಗಿ ಹಾಳಾಗಿದ್ದು, ಇದಕ್ಕೆ ಬೈಕ್ ಸವಾರಿಗಳು ದಿನ ನಿತ್ಯ ಬೀಳುತ್ತಿದ್ದು, ಈಗಾಗಲೇ ಪ್ರಾಣ ಹಾನಿ ಕೂಡ ಆಗಿದೆ. ಹಾಗೆಯೇ, ಇದರ ಜೊತೆಗೆ ಸದರಿ ಸ್ಥಳಗಳಲ್ಲಿ ಅನೇಕ ಟ್ರಕ್‌ಗಳ ಅಪಘಾತ ಸಂಭವಿಸಿ ಜನರು ಸಾವಿಗೆ ಈಡಾಗಿದ್ದಾರೆ, ಇದರ ಬಗ್ಗೆ ಅಧಿಕಾರಿಗಳು ಯಾವುದೇ ರೀತಿಯ ಮಾಹಿತಿಯನ್ನು ಕೊಟ್ಟಿಲ್ಲ. ಮತ್ತೆ ಸದರಿ ಸೇತುವೆಗಳು ಇದುವರೆಗೂ ದುರಸ್ಥಿಯಾಗಿಲ್ಲ.